# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 32/2025**

| | | |
|---|---|---|
| ಹೆಸರು | : ಸಂತೋಷ ಬಗಲಿ | ಫ್ರಾಸಾ–2 |
| ತಂದೆಯ ಹೆಸರು | : ಮಲ್ಲಪ್ಪ | ಚಾಸಾ–4 |
| ವರ್ಷ | : 41 ವರ್ಷ | |
| ಉದ್ಯೋಗ | : ಒಕ್ಕಲುತನ | |
| ವಿಳಾಸ | : ಬೀಳಗಿ | |

ದಿಃ 28.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ದಿಃ 12.01.2025 ರಂದು ನನ್ನನ್ನು ಮತ್ತು ಚಾಸಾ–5 ರವರನ್ನು ಬೀಳಗಿ ಪೊಲೀಸರು ರಾಧಾಕೃಷ್ಣ ಶಾಲೆ ಬಳಿ ಕರೆಯಿಸಿ, ಶಾಲೆಯ ಕಂಪೌಂಡನ ಪಕ್ಕದಲ್ಲಿ ಹಾಕಲಾಗಿದ್ದ ಶೆಡ್ ನ ಬಳಿ ಚಾಸಾ–14/ಮಲ್ಲಪ್ಪ ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ–5 ರವರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಲಾಯಿತು. ಸ್ಥಳ ಪಂಚನಾಮೆ ಕಾಲಕ್ಕೆ ಚಾಸಾ–14 ರವರು ಇದೇ ಸ್ಥಳದಲ್ಲಿ ಆರೋಪಿ ಮತ್ತು ಮೃತ ನಾಗಪ್ಪ ರವರ ಮಧ್ಯ ಜಗಳ ಆದ ಸ್ಥಳ ಮತ್ತು ಆರೋಪಿ ನಾಗಪ್ಪನಿಗೆ ದೊಣ್ಣೆಯಿಂದ ತಲೆಗೆ ಹೊಡೆದ ಸ್ಥಳ ಎಂದು ತಿಳಿಸಿರುತ್ತಾರೆ. ಸದರಿ ಸ್ಥಳ ಪಂಚನಾಮೆ ಕಾಲಕ್ಕೆ ನಾಗಪ್ಪ ರವರು ಕಣ್ಣಿಗೆ ಹಾಕಿಕೊಳ್ಳುವ ಲೆನ್ಸ, ರಕ್ತ ಹತ್ತಿದ ಕಟ್ಟಿಗೆ, ಮಾದರಿ ಮಣ್ಣು, ರಕ್ತ ಹತ್ತಿದ ಮಣ್ಣು, ಬಿಳಿ ಬಣ್ಣದ ಟೋಪಿ, ಟಾವೆಲ್ ಗಳನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಸಾಕ್ಷಿ ಸದರಿ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ–2 ಎಂದು, ಸಾಕ್ಷಿ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ನಿಪಿ–2 ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡ ವಸ್ತುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು ಮಾಲು–1 ರಿಂದ 6 ಎಂದು ಗುರುತಿಸಲಾಯಿತು. ನಿಪಿ–2 ಪಂಚನಾಮೆಯನ್ನು ಸಂಜೆ 4 ರಿಂದ 5 ಗಂಟೆಯವರೆಗೆ ಜರುಗಿಸಲಾಯಿತು. ನಿಪಿ–2 ಪಂಚನಾಮೆ ಕಾಲಕ್ಕೆ 5 ಭಾವಚಿತ್ರಗಳನ್ನು ತೆಗೆಸಿರುತ್ತಾರೆ. ಸಾಕ್ಷಿ ಗುರುತಿಸಿದ ಭಾವಚಿತ್ರಗಳನ್ನು

ಒಟ್ಟಾಗಿ ನಿಶಾನೆ ಪಿ–3 ಎಂದು ಗುರುತಿಸಲಾಯಿತು. ನಿಶಾನೆ ಪಿ–2 ಪಂಚನಾಮೆ ಕಾಲಕ್ಕೆ ಸ್ಥಳದ ಕಚ್ಚಾ ನಕಾಶೆಯನ್ನು ಸಹ ಪೊಲೀಸರು ತೆಗೆದಿರುತ್ತಾರೆ. ಸಾಕ್ಷಿ ಸದರಿ ನಕ್ಷೆ ನೋಡಿ ಗುರುತಿಸಿದುದ ಅದನ್ನು ನಿಶಾನೆ ಪಿ–4 ಎಂದು, ಸಾಕ್ಷಿ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಪಿ ಹೆಚ್ ಎಂ ವಕೀಲರಿಂದ ಆರೋಪಿ ಪರ**

ನಾಗರಾಳ ಗ್ರಾಮಕ್ಕೂ ಮತ್ತು ಬೀಳಗಿಗೂ ಸುಮಾರು 5 ಕಿ.ಮೀ ಅಂತರ ಇರಬಹುದು. ಪಂಚನಾಮೆಗೆ ಬರಬೇಕು ಎಂದು ಪೊಲೀಸರು ನನಗೆ ಯಾವುದೆ ಲಿಖಿತ ನೋಟಿಸ ಕೊಟ್ಟಿರುವುದಿಲ್ಲ. ರಾಧಾಕೃಷ್ಣ ಶಾಲೆಯ ಉತ್ತರ ಭಾಗಕ್ಕೆ ಮುಖ್ಯ ದ್ವಾರ ಇರುತ್ತದೆ ಎಂದರೆ ಸರಿ. ಶಾಲೆಯ ಸುತ್ತಲೂ ಕಂಪೌಂಡ ಇರುತ್ತದೆ ಎಂದರೆ ಸರಿ. ಕಂಪೌಂಡನ ಪೂರ್ವಕ್ಕೆ ಒಂದು ಶೆಡ್ ಇರುತ್ತದೆ ಎಂದರೆ ಸರಿ. ಸದರಿ ಶೆಡ್ ನ ಮುಂಭಾಗದಲ್ಲಿ ನೀರು ಕಾಯಿಸುವ ಒಲೆ ಮತ್ತು ಕಟ್ಟಡ ಕಟ್ಟುವ ಕಲ್ಲುಗಳು ಇತ್ತು ಎಂದರೆ ಸರಿ. ನೀರು ಕಾಯಿಸುವ ಒಲೆ ಮತ್ತು ಕಲ್ಲುಗಳ ಮಧ್ಯ ರಕ್ತದ ಕಲೆಗಳು ಇತ್ತು ಎಂದರೆ ಸರಿ.

2. ಸದರಿ ಘಟನಾ ಸ್ಥಳದ ಚಕ್ಕುಬಂದಿ ಪೂರ್ವಕ್ಕೆ – ಜಮೀನು, ಪಶ್ಚಿಮಕ್ಕೆ– ನಾಗರಾಳಾ ಊರಿಗೆ ಹೋಗುವ ರಸ್ತೆ, ಉತ್ತರಕ್ಕೆ – ರಸ್ತೆ , ದಕ್ಷಿಣಕ್ಕೆ – ಜಮೀನು ಇರುತ್ತವೆ. ಸದರಿ ಘಟನಾ ಸ್ಥಳದ ಅಕ್ಕಪಕ್ಕದಲ್ಲಿರುವ ಜಮೀನುಗಳು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ನಿಶಾನೆ ಪಿ–2 ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ–1, ಚಾಸಾ–5 ಮತ್ತು ನಾನು ಒಂದೇ ಊರಿನ ವಾಸಿಗಳು ಎಂದರೆ ಸರಿ. ಚಾಸಾ–1 ರವರು ನನ್ನ ದೂರದ ಸಂಬಂಧಿಕರು ಎಂದರೆ ಸರಿ.

3. ದಿಃ 12.01.2025 ರಂದು ನನ್ನ ಮತ್ತು ಚಾಸಾ–5 ರವರ ಸಮಕ್ಷಮ ರಾಧಾಕೃಷ್ಣ ಶಾಲೆಯ ಪಕ್ಕದಲ್ಲಿ ಯಾವುದೇ ಸ್ಥಳ ಪಂಚನಾಮೆ ಜರುಗಿಸಿರುವುದಿಲ್ಲ ಮತ್ತು ಸ್ಥಳದಿಂದ ಮು ಮಾಲು–1 ರಿಂದ 6 ಜಪ್ತಿ ಪಡಿಸಿಕೊಂಡಿರುವುದಿಲ್ಲ ಮತ್ತು ಯಾವುದೇ ನಕ್ಷೆಯನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ.

4. ಚಾಸಾ–1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ.  32/2025**

| | | | |
|---|---|---|---|
| ಹೆಸರು | : | ಪಾರ್ವತಿ ತೋಳಮಟ್ಟಿ | ಫ್ರಾಸಾ– 1 |
| ತಂದೆಯ ಹೆಸರು | : | ನಾಗಪ್ಪ | ಚಾಸಾ– 1 |
| ವರ್ಷ | : | 56 ವರ್ಷ | |
| ಉದ್ಯೋಗ | : | ಮನೆಗೆಲಸ | |
| ವಿಳಾಸ | : | ಬೀಳಗಿ | |

ದಿಃ 28.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಮೃತ ನಾಗಪ್ಪ ನನ್ನ ಗಂಡ.  ಚಾಸಾ–16/ರಾಜೇಂದ್ರ ದೇಶಪಾಂಡೆ ನನಗೆ ಗೊತ್ತು, ಅವರು ರಾಧಾಕೃಷ್ಣ ಶಾಲೆಯನ್ನು ನಡೆಸುತ್ತಿದ್ದರು. ಚಾಸಾ–13/ಗಣೇಶ, ಚಾಸಾ–14/ಮಲ್ಲಪ್ಪ ನನ್ನ ಗಂಡು ಮಕ್ಕಳು. ಚಾಸಾ–20/ಬಸವರಾಜ ನನ್ನ ಅಣ್ಣ. ನ್ಯಾಯಾಲಯದ ಮುಂದಿರುವ ಆರೋಪಿ/ಧನರಾಜ ನನಗೆ ಗೊತ್ತು.

2. ನನ್ನ ಗಂಡ ನಾಗಪ್ಪ ರವರು ಚಾಸಾ–16 ರವರಿಗೆ ಸೇರಿದ ರಾಧಾಕೃಷ್ಣ ಶಾಲೆಯಲ್ಲಿ ಕಾವಲುಗಾರ ಅಂತಾ ಕೆಲಸ ಮಾಡುತ್ತಿದ್ದರು. ಆರೋಪಿ ಸದರಿ ಶಾಲೆಯ ವಸತಿ ಮಕ್ಕಳಿಗೆ ರಾತ್ರಿ ಸಮಯದಲ್ಲಿ ಮನೆಪಾಠ ಮಾಡುತ್ತಿದ್ದನು.

3. ದಿಃ 12.01.2025 ರಂದು ನಾನು ಮನೆಯಲ್ಲಿದ್ದಾಗ ಚಾಸಾ–16/ರಾಜೇಂದ್ರ ರವರು ನನ್ನ ಮಗ ಚಾಸಾ–13 ರವರಿಗೆ ಕರೆ ಮಾಡಿ, ಆರೋಪಿ ಮತ್ತು ನನ್ನ ಗಂಡನ ಮಧ್ಯ ಜಗಳವಾಗಿ, ಆರೋಪಿ ನನ್ನ ಗಂಡನಿಗೆ ದೊಣ್ಣೆಯಿಂದ ಬಡಿದಿದ್ದರಿಂದ ತಲೆಗೆ ಪೆಟ್ಟಾಗಿದ್ದರಿಂದ ಶಾಲೆಗೆ ಹೋಗಿ ನಾಗಪ್ಪನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದರು. ನಂತರ ನಾನು ಮತ್ತು ನನ್ನ ಮಕ್ಕಳಾದ ಚಾಸಾ–13 ಮತ್ತು ಚಾಸಾ–14 ರವರು ಸೇರಿ ರಾಧಾಕೃಷ್ಣ ಶಾಲೆಗೆ ಹೋಗಿ ನೋಡಿದಾಗ ನನ್ನ ಗಂಡ ನಾಗಪ್ಪನ ತಲೆಗೆ ತೀವ್ರವಾದ ಪೆಟ್ಟಾಗಿದ್ದು, ಪ್ರಜ್ಞೆ ತಪ್ಪಿತ್ತು.  ಆಗ ಸದರಿ ಸ್ಥಳದಲ್ಲಿ ಚಾಸಾ–

17/ಶಿವಾನಂದ ಅಸ್ಕಿ ಮತ್ತು ಚಾಸಾ-19/ಮುತ್ತು ರವರು ಸಹ ಸ್ಥಳದಲ್ಲಿ ಇದ್ದರು. ನಂತರ ವಿಚಾರ ಮಾಡಲಾಗಿ ಆರೋಪಿ ನನ್ನ ಗಂಡ ನಾಗಪ್ಪನಿಗೆ ಬೆಳಗಿನ ಜಾವ 3 ಗಂಟೆಗೆ ಮಕ್ಕಳಿಗೆ ಸ್ನಾನ ಮಾಡಲು ನೀರು ಕಾಯಿಸುವ ವಿಚಾರವಾಗಿ ಅವರ ಮಧ್ಯ ಜಗಳವಾಗಿ ಇಬ್ಬರೂ ಬಡಿದಾಡಿದ್ದು, ಆರೋಪಿ ದೊಣ್ಣೆಯಿಂದ ನನ್ನ ಗಂಡನ ತಲೆಗೆ ಹೊಡೆದಿರುತ್ತಾನೆ ಎಂದು ತಿಳಿದುಬಂದಿತು. ನಂತರ ನನ್ನ ಗಂಡ ನಾಗಪ್ಪನನ್ನು ಅಂಬ್ಯುಲೆನ್ಸ ನಲ್ಲಿ ಬೀಳಗಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ವೈಧ್ಯರ ಸಲಹೆ ಮೇರೆಗೆ ನನ್ನ ಗಂಡನನ್ನು ಬಾಗಲಕೋಟೆ ಜಿಲ್ಲಾ ಆಸ್ಪತ್ರೆಗೆ ಸಾಗಿಸಲಾಯಿತು. ನಂತರ ಬಾಗಲಕೋಟೆ ಆಸ್ಪತ್ರೆಯ ವೈಧ್ಯರು ನನ್ನ ಗಂಡನನ್ನು ಪರೀಕ್ಷೆ ಮಾಡಿ ದಾರಿಯಲ್ಲಿಯೆ ಮೃತಪಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ.

4. ನಂತರ ನಾನು ಮತ್ತು ಚಾಸಾ-20/ಬಸವರಾಜ ರವರು ಸೇರಿ ಬೀಳಗಿ ಪೊಲೀಸ ಠಾಣೆಗೆ ಭೇಟಿ ನೀಡಿ, ನಾನು ಹೇಳಿದಂತೆ ಚಾಸಾ-20 ರವರ ಕಡೆಯಿಂದ ದೂರನ್ನು ಬರೆಯಿಸಿ, ದೂರು ದಾಖಲಿಸಿರುತ್ತೇನೆ. ಸದರಿ ದೂರಿಗೆ ನಾನು ನನ್ನ ಹೆಬ್ಬಟ್ಟಿನ ಗುರುತು ಹಾಕಿರುತ್ತೇನೆ. ಸಾಕ್ಷಿ ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-1 ಎಂದು ಗುರುತಿಸಲಾಯಿತು.

5. ಅದೇ ದಿನ ನನ್ನ ಗಂಡನ ಮರಣೋತ್ತರ ಪರೀಕ್ಷೆ ನಂತರ ನನ್ನ ಗಂಡನ ಮೃತದೇಹವನ್ನು ಅಂತ್ಯಕ್ರಿಯೆಗಾಗಿ ನೀಡಿರುತ್ತಾರೆ. ಆರೋಪಿಯೆ ನಾಗಪ್ಪನ ಮೇಲೆ ದೊಣ್ಣೆಯಿಂದ ಹಲ್ಲೆ ಮಾಡಿದ ಬಗ್ಗೆ ಚಾಸಾ-16 ರವರಿಗೆ ತಿಳಿಸಿರುತ್ತಾನೆ ಎಂದು ಚಾಸಾ-16 ರವರು ನಮಗೆ ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ.ಪಿ ಹೆಚ್ ಎಂ ವಕೀಲರಿಂದ ಆರೋಪಿ ಪರ**

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಾಗರಾಳ ಗ್ರಾಮ ಬೀಳಗಿಯಿಂದ 3 ಕಿ.ಮೀ ಅಂತರದಲ್ಲಿ ಇರುತ್ತದೆ. ನಾಗರಾಳದಿಂದ ಬಲಕ್ಕೆ ಹೋದರೆ ರಾಧಾಕೃಷ್ಣ ಶಾಲೆ ಇರುತ್ತದೆ ಎಂದರೆ ಸರಿ. ರಾಧಾಕೃಷ್ಣ ಶಾಲೆ ದಾಟಿದ ನಂತರ ಚಾಸಾ-16 ರವರಿಗೆ ಸೇರಿದ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಶಾಲೆಯ ಆವರಣದ ಪಕ್ಕದಲ್ಲಿ ಚಾಸಾ-16 ರವರಿಗೆ ಸೇರಿದ ಜಮೀನಿನಲ್ಲಿ ಒಂದು ಶೆಡ್ ಇರುತ್ತದೆ ಎಂದರೆ ಸರಿ. ಶೆಡ್ ನ ಪಕ್ಕದಲ್ಲಿ ನೀರು ಕಾಯಿಸುವ ಒಲೆ ಇರುತ್ತದೆ ಮತ್ತು ಕಟ್ಟಡ ಕಟ್ಟಲು ಉಪಯೋಗಿಸುವ ಕಲ್ಲುಗಳು ಸಹ ಇರುತ್ತವೆ ಎಂದರೆ ಸರಿ.

2. ನನ್ನ ಗಂಡ ಸುಮಾರು 25 ವರ್ಷಗಳಿಂದ ರಾಧಾಕೃಷ್ಣ ಶಾಲೆಯಲ್ಲಿ ಕಾವಲುಗಾರ ಅಂತಾ ಕೆಲಸ ಮಾಡುತ್ತಿದ್ದರು. ಆರೋಪಿಯ ಹೆಸರು ಮತ್ತು ಖಾಯಂ ವಿಳಾಸ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಆರೋಪಿಯ ಹೆಸರು ಧನರಾಜ ಮತ್ತು ಸಿಂಧಗಿ ಗ್ರಾಮದ ವಾಸಿ ಎಂದು ನುಡಿಯುತ್ತಾರೆ. ಆರೋಪಿ ಮತ್ತು ನನ್ನ ಗಂಡ ರವರಿಗೆ ನಾನು ರಾತ್ರಿ ವೇಳೆಯಲ್ಲಿ ಊಟ ತೆಗೆದುಕೊಂಡು ಹೋಗುತ್ತಿದ್ದೆ, ಆ ಸಮಯದಲ್ಲಿ ಅವರಿಬ್ಬರೂ ಅನೋನ್ಯವಾಗಿದ್ದರು.

3. ನನ್ನ ಗಂಡ ರಾಧಾಕೃಷ್ಣ ಶಾಲೆಯಲ್ಲಿ ಕಸ ಹೊಡಿಯುವ ಕೆಲಸ, ಮಕ್ಕಳಿಗೆ ನೀರು ಕಾಯಿಸುವ ಕೆಲಸ, ವಿಧ್ಯುತ್ ದೀಪಗಳನ್ನು ಹಾಕುವ ಹಾಗೂ ಆರಿಸುವ ಕೆಲಸ ಮಾಡುತ್ತಿದ್ದರು. ಆರೋಪಿ ರಾತ್ರಿ ವೇಳೆಯಲ್ಲಿ ಸದರಿ ಶಾಲೆಯಲ್ಲಿ ಮೇಲ್ವಿಚಾರಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ.

4. ನನ್ನ ಗಂಡನಿಗೆ ಸುಮಾರು 70 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿ ಆಗಿರಬಹುದು ಎಂದು ನುಡಿಯುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋದಾಗ ನನ್ನ ಗಂಡ ನೀರು ಕಾಯಿಸುವ ಬಾಂಡಲಿ ಮತ್ತು ಕಲ್ಲಿನ ಮಧ್ಯ ಬಿದ್ದಿದ್ದರು ಎಂದರೆ ಸರಿಯಲ್ಲ. ನನ್ನ ಗಂಡನ ತಲೆಯ ಹಿಂಭಾಗಕ್ಕೆ ಪೆಟ್ಟಾಗಿತ್ತು ಎಂದರೆ ಸರಿ. ಚಾಸಾ–16 ರವರು ಚಾಸಾ–14 ರವರಿಗೆ ಕರೆ ಮಾಡಿದಾಗ ನನ್ನ ಗಂಡ ನಾಗಪ್ಪ ನೀರು ಕಾಯಿಸುವ ವೇಳೆಯಲ್ಲಿ ಕಾಲುಜಾರಿ ಕಲ್ಲಿನ ಮೇಲೆ ಬಿದ್ದು ಪೆಟ್ಟು ಮಾಡಿಕೊಂಡಿರುತ್ತಾರೆ ಎಂದು ನಮಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

5. ಘಟನೆ ಆಗಿದೆ ಎಂದು ಹೇಳುವ ದಿನ ನನ್ನ ಗಂಡ ಕಾಲು ಜಾರಿ ಬೀಳುವ ಮುನ್ನ ಆರೋಪಿಗೆ ಒಲೆಗೆ ಹಾಕಿದ್ದ ಕೆಂಡವಿದ್ದ ಕಟ್ಟಿಗೆಯಿಂದ ಆರೋಪಿಯ ಎಡಗೈನ ಹಸ್ತದ ಮೇಲೆ ಮತ್ತು ತಲೆ ಮೇಲೆ ನೀರು ಕಾಯಿಸುವ ವಿಚಾರವಾಗಿ ಜಗಳವಾಡಿ ಹೊಡೆದಿದ್ದನು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡನಿಗೂ ಮತ್ತು ಆರೋಪಿಗೂ ಜಗಳವಾಗಿ ಹೊಡೆದಾಡಿದ ವಿಚಾರ ನನಗೆ ಬೆಳಿಗ್ಗೆ ಸುಮಾರು 7–30 ಗಂಟೆಗೆ ತಿಳಿದು ಬಂದಿತು. ನಾನು ಸುಮಾರು 8 ಗಂಟೆಗೆ ಘಟನಾ ಸ್ಥಳಕ್ಕೆ ಹೋಗಿರಬಹುದು. ನಾನು ಘಟನಾ ಸ್ಥಳಕ್ಕೆ ಹೋದ ನಂತರ ಸ್ಥಳಕ್ಕೆ ಅಂಬ್ಯುಲೆನ್ಸ ಬಂದಿರುತ್ತದೆ. ಸದರಿ ಘಟನಾ ಸ್ಥಳದಿಂದ ಅಂಬ್ಯುಲೆನ್ಸ ಬಂದ ನಂತರ ನನ್ನ ಗಂಡನನ್ನು ಬೀಳಗಿ ಆಸ್ಪತ್ರೆಗೆ ಸುಮಾರು 10–15 ನಿಮಿಷದಲ್ಲಿ ಕರೆದುಕೊಂಡು ಹೋಗಲಾಯಿತು. ಬೀಳಗಿ ಆಸ್ಪತ್ರೆ ವೈದ್ಯರು ನನ್ನ ಗಂಡನಿಗೆ ಪ್ರಥಮ ಚಿಕಿತ್ಸೆ ಕೊಟ್ಟು ಬಾಗಲಕೋಟೆ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿರುತ್ತಾರೆ. ಬಾಗಲಕೋಟೆ

ಆಸ್ಪತ್ರೆಗೆ ಹೋಗುವ ದಾರಿ ಮಧ್ಯದಲ್ಲಿ ನನ್ನ ಗಂಡ ಮೃತಪಟ್ಟಿರುತ್ತಾನೆ. ನನಗೆ ಸದರಿ ವಿಚಾರ ಬೆಳಿಗ್ಗೆ ಸುಮಾರು 9–30 ಗಂಟೆಗೆ ತಿಳಿದುಬಂದಿರುತ್ತದೆ.

6. ಬೀಳಗಿ ಸರ್ಕಾರಿ ಆಸ್ಪತ್ರೆಯ ಪಕ್ಕದಲ್ಲಿಯೆ ಬೀಳಗಿ ಪೊಲೀಸ ಠಾಣೆ ಇರುತ್ತದೆ ಎಂದರೆ ಸರಿ. ಬೀಳಗಿ ಆಸ್ಪತ್ರೆಗೆ ನನ್ನ ಗಂಡನನ್ನು ಕರೆದುಕೊಂಡು ಹೋಗಿದ್ದಾಗ ಪೊಲೀಸರು ಸಹ ಆಸ್ಪತ್ರೆಗೆ ಬಂದಿದ್ದರು. ಆ ಸಮಯದಲ್ಲಿ ಪೊಲೀಸರಿಗೆ ನನ್ನ ಗಂಡ ಕಾಲು ಜಾರಿ ಬಿದ್ದು ನನ್ನ ಗಂಡ ಪೆಟ್ಟು ಮಾಡಿಕೊಂಡಿರುತ್ತಾನೆ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ–17/ಶಿವಾನಂದ ಮತ್ತು ಆರೋಪಿಗೂ ಭಿನ್ನಾಭಿಪ್ರಾಯವಿದ್ದು ಆರೋಪಿಯನ್ನು ಶಾಲೆಯಿಂದ ಹೊರಗೆ ಹಾಕಬೇಕು ಎಂದು ಚಾಸಾ–17 ರವರು ಹೇಳಿದಂತೆ ಆರೋಪಿ ವಿರುದ್ಧ ಸುಳ್ಳು ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ನನ್ನ ಗಂಡ ಮೃತಪಟ್ಟ ನಂತರ ನಾನು ದೂರನ್ನು ದಾಖಲಿಸಲು ಬೀಳಗಿ ಪೊಲೀಸ ಠಾಣೆಗೆ ಹೋಗಿರುತ್ತೇನೆ. ಬೀಳಗಿ ಪೊಲೀಸ ಠಾಣೆಯಲ್ಲಿ ಪೊಲೀಸರು ಮೊದಲೆ ತಯಾರಿಸಿದ ದೂರಿಗೆ ನಾನು ನನ್ನ ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–1/ದೂರಿನಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

7. ನನ್ನ ಗಂಡ ಮತ್ತು ಆರೋಪಿ ಮಧ್ಯ ಯಾವುದೇ ಜಗಳವಾಗಿರಲಿಲ್ಲ ಮತ್ತು ಆರೋಪಿ ನನ್ನ ಗಂಡನಿಗೆ ದೊಣ್ಣೆಯಿಂದ ತಲೆ ಮೇಲೆ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ–16 ಮತ್ತು 17 ರವರ ಮಾತು ಕೇಳಿ ಆರೋಪಿ ವಿರುದ್ಧ ಸುಳ್ಳು ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .